ಓ.ಎಸ್: 10/2015

ಡಿ. ಡಬ್ಲ್ಯೂ : 02

**ಸಾಕ್ಷಿಗೆ ದಿನಾಂಕ 12.08.2024 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲು: ವಾದಿ ಪರ ವಕೀಲರಿಂದ**

ನಾನು 8 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಬರೆಯಲು ಬರುತ್ತದೆ. ನನಗೆ 51 ವರ್ಷ ವಯಸ್ಸು. ಈ ದಿನ ನನ್ನನ್ನು ಪ್ರತಿವಾದಿಗಳು ಸಾಕ್ಷಿ ನುಡಿಯಲು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ವ್ಯವಸಾಯದ ಕೆಲಸಕ್ಕೆ ನಾವು ಮತ್ತು ಪ್ರತಿವಾದಿಗಳು ಪರಸ್ಪರ ಹೊಂದಾಣಿಕೆಯಿಂದ ಕೆಲಸ ಮಾಡುತ್ತೇವೆ ಎಂದರೆ ಸರಿ. ಆಗಾಗಿ ಪ್ರತಿವಾದಿಗಳು ಮತ್ತು ನಮ್ಮ ಸಂಬಂಧ ಚೆನ್ನಾಗಿದೆ ಎಂದರೆ ಸರಿ. ದಾವ ಸ್ವತ್ತು ಯಾವುದು ಎಂದು ನನಗೆ ತಿಳಿದಿಲ್ಲ. ದಾವ ಸ್ವತ್ತಿನ ಸರ್ವೆ ನಂ. 218 ಆಗಿರುತ್ತದೆ. ಸರ್ವೆ ನಂ. 218 ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದು ತಿಳಿದಿರುವುದಿಲ್ಲ. ನಮ್ಮ ಊರಿನ ಮಾದಯ್ಯ ಬಿನ್ ಮಾದೇಗೌಡ ಪರಿಚಯವಿರುತ್ತಾರೆ. ಮಾದಯ್ಯ ಬಿನ್ ಮಾದೇಗೌಡ ರವರು ಪ್ರತಿವಾದಿಗಳ ವಿರುದ್ದ ಅಸಲು ದಾವೆ ಸಂಖ್ಯೆ 122/1986 ರಂತೆ ದಾವೆ ದಾಖಲಿಸಿದ್ದರು ಎಂದರೆ ಆ ಬಗ್ಗೆ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಸದರಿ ಹಣ ವಸೂಲಾತಿ ದಾವೆ ಸಂಬಂಧ ಹಣ ಪಾವತಿಸದೆ ಇದ್ದ ಕಾರಣ ಜಾರಿ ಸಂಖ್ಯೆ 134/1986 ರಂತೆ ಜಾರಿ ಅರ್ಜಿ ದಾಖಲಿಸಿದ್ದ ಬಗ್ಗೆ ನನಗೆ ತಿಳಿದಿರುವುದಿಲ್ಲ. ದಾವ ಸ್ವತ್ತನ್ನು ದಿ. 18.06.1987 ರಲ್ಲಿ ವಾದಿಯ ಗಂಡ ಹುಚ್ಚೇಗೌಡ ದಾವ ಸ್ವತ್ತನ್ನು

ಹರಾಜಿನ ಮೂಲಕ ಖರೀದಿಸಿರುತ್ತಾರೆ ಎಂದರೆ ಆ ಬಗ್ಗೆ ನನಗೆ ತಿಳಿದಿಲ್ಲ. ಪ್ರತಿವಾದಿಗಳು ನನ್ನ ಜೊತೆ ಚೆನ್ನಾಗಿರುವುದರಿಂದ ಅವರಿಗೆ ಅನುಕೂಲವಾಗಲಿ ಎಂದು, ವಾದಿಗಳು ಬೇರೆ ಊರಿನವರಾಗಿದ್ದರಿಂದ ಮೇಲ್ಕಂಡ 18.06.1987 ರ ಜಾರಿ ಅರ್ಜಿ ಆದೇಶದ ಮೂಲಕ ವಾದಿಯ ಗಂಡ ನಂತರ ವಾದಿ ದಾವ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುತ್ತಾರೆ, ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಸ್ವತ್ತು ಸಿ.ಡಿ.ಎಸ್ ನಾಲಾ ನೀರಾವರಿಗೆ ಒಳಪಟ್ಟ ವಾರ್ಷಿಕ 2 ಫಸಲು ಬೆಳೆದುಕೊಂಡು ವಾದಿಗಳು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ